ಓ ಎಸ್ ನಂಃ 84/2023 ಪಿ.ಡಬ್ಲ್ಯೂ (1)

**ದಿನಾಂಕಃ 05 -11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಎಮ್.ಎ.ಯು ಮತ್ತು ಶ್ರೀ ಸಿ.ಎಫ್.ಕೆ. ವಕೀಲರಿಂದಃ**

ಬಸಮ್ಮ ನನ್ನ ಅಕ್ಕ. ಅವಳಿಗೂ ನನಗೂ 11 ವರ್ಷ ವಯಸ್ಸು ವ್ಯತ್ಯಾಸ ಇದೆ. ನನ್ನ ತಂದೆ ಜೀವಿತ ಕಾಲದಲ್ಲಿ ನಮ್ಮಿಬ್ಬರ ಮದುವೆಯಾಗಿದೆ ಎಂದರೆ ಸರಿ. ನನ್ನ ತಂದೆ 1973 ರಲ್ಲಿ ಮರಣ ಹೊಂದಿದರು ಎಂದರೆ ಸರಿ.

2. ದಾವಾ ಆಸ್ತಿಗಳು ನಮ್ಮ ತಂದೆಯ ಸಂಪೂರ್ಣ ಮಾಲೀಕತ್ವದ ಆಸ್ತಿ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಗೆ ಪಿತ್ರಾರ್ಜಿತ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ತಂದೆಯ ತಂದೆಯಿಂದ ಈ ಆಸ್ತಿಗಳು ಬಸಮ್ಮನ ಹೆಸರಿಗೆ ವರ್ಗಾವಣೆ ಆದವು ಎಂದರೆ ಸರಿ. ಆದರೆ ನನಗೆ ಗೊತ್ತಾಗದಂತೆ ಮಾಡಿಕೊಂಡಿದ್ದಾರೆ.

3. ಯಾವ ಆಧಾರದಲ್ಲಿ ಬಸಮ್ಮ ದಾವಾ ಆಸ್ತಿಗಳನ್ನು ತನ್ನ ಹೆಸರಿಗೆ ದಾಖಲಿಸಿಕೊಂಡಳು ಅಂತಾ ಗೊತ್ತಿಲ್ಲ. ಈ ಎಲ್ಲಾ ಆಸ್ತಿಗಳ ಹಳೆಯ ಪಹಣಿಗಳನ್ನು ನೋಡಿದ್ದೇನೆ. ನನ್ನ ತಂದೆಯ ಮರಣದ ನಂತರ ಬಸಮ್ಮ ಇವರೇ ದಾವಾ ಆಸ್ಥಿಗಳನ್ನು ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ಆದರೆ ಕೊಡುತ್ತೇನೆ ಅಂತಾ ಹೇಳಿ ಕೊಟ್ಟಿಲ್ಲ. ನನ್ನ ತಂದೆಯಿಂದ ಬಸಮ್ಮನಿಗೆ ದಾವಾ ಆಸ್ತಿ ಕುರಿತು ಖರೀದಿ ಪತ್ರ ಆಗಿದೆ ಎಂದರೆ ಗೊತ್ತಿಲ್ಲ.

4. ನನ್ನ ತಂದೆ ಈ ಆಸ್ಥಿಗಳನ್ನು ಬಸಮ್ಮ ಇವರಿಗೆ ಮಾರಿದ್ದಾರೆ ಅಥವಾ ಇಲ್ಲ, ಹಣ ಪಡೆದಿದ್ದರಾ ಅಥವಾ ಇಲ್ಲ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಬಸಮ್ಮ ತನ್ನ ಹೆಸರಿಗೆ ಈ ಆಸ್ತಿಗಳನ್ನು ದಾಖಲಿಸಿಕೊಂಡ ನಂತರ ಅದು ತಪ್ಪು ಇದೆ ಎಂದು ನಾನು ತಹಶೀಲ್ದಾರ ಆಫೀಸ್ ನಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ಮುಟೇಶನ್ ಆದೇಶಗಳ ಕುರಿತು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

5. ಬಸಮ್ಮನ ಗಂಡ ವಿರಪಣ್ಣ ಅಳವಂಡಿ 1971 ರಲ್ಲಿ ಮರಣ ಹೊಂದಿದ ಎಂದರೆ ಸರಿ. ಬಸಮ್ಮ

ತನ್ನ ಗಂಡನ ಮನೆಯಿಂದ ತಂದ 2000/- ರೂಪಾಯಿ ಕೊಟ್ಟು ಈ ಎಲ್ಲಾ ಆಸ್ತಿಗಳನ್ನು ಖರೀದಿ

ಹಿಡಿದಳು ಎನ್ನುವುದು ಗೊತ್ತಿಲ್ಲ. 1972-73 ರಲ್ಲಿ ಬಸಮ್ಮನ ಹೆಸರಿಗೆ ಈ ಆಸ್ತಿಗಳು ದಾಖಲಾದ ಕಾಲದಿಂದ ಪಾಲು ಕೇಳುತ್ತಾ ಬಂದಿದ್ದೇನೆ. ಆಗಿನಿಂದ ಕೇಳಿದರೂ ಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿ ನಂ. 2 ರಿಂದ 5 ಬಸಮ್ಮನ ಮಕ್ಕಳು ಎಂದರೆ ಸರಿ. ಪ್ರತಿವಾದಿ ನಂ. 2 ರಿಂದ 5 ಈ ಆಸ್ತಿಗಳನ್ನು 21-09-1998 ರಂದು ಭಾಗ ಮಾಡಿಕೊಂಡು ತಮ್ಮ ತಮ್ಮ ಹೆಸರಿಗೆ ದಾಖಲಿಸಿಕೊಂಡಿದ್ದಾರೆ ಎಂದರೆ ಸರಿ. ಆಗ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ, ಎಲ್ಲಾ ಮೋಸ ಮಾಡಿದ್ದಾರೆ.

6. ವಿಭಾಗ ಮಾಡಿಕೊಂಡು 1998 ರಿಂದ ತಮ್ಮ ತಮ್ಮ ಹೆಸರಿಗೆ ಖಾತಾ ಮಾಡಿಕೊಂಡಿದ್ದಾರೆ ಎಂದರೆ ಸರಿ. ವಿಭಾಗ ಪತ್ರದ ಆಧಾರದಲ್ಲಿ ಕಂದಾಯ ದಾಖಲೆಯಲ್ಲಿ ದಾಖಲಾಗಿವೆ ಎಂದರೆ ಸರಿ. 1998 ರ ಪಾಲುವಾಟ್ನಿ ನಾವು ಚಾಲೆಂಜ್ ಮಾಡಿಲ್ಲ ಎಂದರೆ ಸರಿ. ನಮ್ಮ ತಂದೆ ಬಸಮ್ಮಳಿಗೆ ಮಾರಾಟ ಮಾಡಿದ್ದರಿಂದ ಇದು ಜಂಟಿ ಕುಟುಂಬದ ಆಸ್ತಿ ಅಲ್ಲಾ ಎಂದರೆ ಸರಿಯಲ್ಲ.

7. ನನ್ನ ತಂದೆಯ ಮರಣ ಕಾಲಕ್ಕೆ ದಾವಾ ಆಸ್ತಿ ಆತನ ಹೆಸರಿನಲ್ಲಿ  ಇರಲಿಲ್ಲಾ ಎಂದರೆ ಸರಿ. 1972 ರ ಖರೀದಿ ಪತ್ರದ ಪ್ರಕಾರ ಬಸಮ್ಮಳೇ ಮಾಲೀಕಳು ಎಂದರೆ ಸರಿಯಲ್ಲ. 50 ವರ್ಷ ತಡ ಮಾಡಿ ಕೊರ್ಟಗೆ ಬಂದೆ ಎಂದರೆ ಸರಿ.  ಇದು ಕಾಲ ಮೀರಿದ ದಾವೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬಸಮ್ಮನ ಆಸ್ತಿ ಲಪಾಟಿಯಿಸಲು ಸುಳ್ಳು ಕೇಸು ಹಾಕಿದೆ ಎಂದರೆ ಸರಿಯಲ್ಲ.

8. ಬಸವ್ವ ತನ್ನ ಗಂಡನ ಮರಣದ ನಂತರ ನನ್ನ ತಂದೆ ಜೊತೆಗೆ ಇದ್ದಳು ಎಂದರೆ ಸರಿ. ಆಗ ನಾನು ಸಹ ಅಲ್ಲೆ ಇದ್ದೆ. ನನ್ನ ತಂದೆ ತಾಯಿ ಮರಣದ ನಂತರ ಹೋಗಿದ್ದೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿದೆ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**